ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/34(ಸಿಡಿಸಿ)/2017-18 //1038

ನಿರ್ದೇಶಕರವರ ಕಛೇರಿ
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು-560 001
ದಿನಾಂಕ: 19-07-2017.

## -:ಸುತ್ತೋಲೆ:-

**ವಿಷಯ:-** ಚಾಲೆಂಜ್ ಫಂಡ್ ಯೋಜನೆಗೆ ಸಂಬಂಧಿಸಿದಂತೆ, ಸೃಜನಾತ್ಮಕವಾದ ಹಾಗೂ ಪರಿಣಾಮಕಾರಿಯಾದ ಯೋಜನೆಗಳ ಕುರಿತು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವ ಬಗ್ಗೆ.

**ಉಲ್ಲೇಖ:-** ಸರ್ಕಾರದ ಪತ್ರ ಸಂಖ್ಯೆ: ಇಡಿ 115 ಹೆಚ್‌ಪಿಯು 2017, ದಿನಾಂಕ: 20-06-2017.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಲ್ಲಿ, ಸರ್ಕಾರವು ಸೃಜನಾತ್ಮಕ ಹಾಗು ಪರಿಣಾಮಕಾರಿಯಾದ ಯೋಜನೆಗಳನ್ನು ಸರ್ಕಾರದ ಇಲಾಖೆಗಳಲ್ಲಿ ಹಾಗು ಸಂಸ್ಥೆಗಳಲ್ಲಿ ಜಾರಿಗೆ ತರುವ ಸಲುವಾಗಿ "ಚಾಲೆಂಜ್ ಫಂಡ್" ಯೋಜನೆಯನ್ನು ಸ್ಥಾಪಿಸಿದ್ದು, ಸರ್ಕಾರದ ಅಧಿಕಾರಿ/ಸಿಬ್ಬಂದಿ/ಸರ್ಕಾರದ ಸಂಸ್ಥೆ ಇವರುಗಳು ಪ್ರಯೋಗಾತ್ಮಕ ಯೋಜನೆಗಳನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಉತ್ತಮ ಪೈಲೆಟ್ ಯೋಜನೆಗಳನ್ನು ಕಾರ್ಯಗತಗೊಳಿಸಲು ಪ್ರಸ್ತಾವನೆಗಳನ್ನು ಸಲ್ಲಿಸುವಂತೆ ನಿರ್ದೇಶಿಸಿರುತ್ತಾರೆ. ಸದರಿ ಯೋಜನೆಯ ವಿಸ್ತೃತ ಯೋಜನಾ ವರದಿ (Detailed Project Report) ತಯಾರಿಸುವಾಗ ಈ ಕೆಳಕಂಡ ಅಂಶಗಳನ್ನು ಪರಿಗಣಿಸಬೇಕಾಗಿರುತ್ತದೆ.

1. ಪ್ರಸ್ತುತ ಇರುವ ಸೇವೆಯಲ್ಲಿ ಗುಣಮಟ್ಟವನ್ನು ಉತ್ತಮಗೊಳಿಸುವುದು.
2. ಸೇವೆಯನ್ನು ನೀಡುವಲ್ಲಿ ವೆಚ್ಚವನ್ನು ಕಡಿತಗೊಳಿಸುವುದು.
3. ಜನರ ಅನುಕೂಲಕ್ಕಾಗಿ ಹೊಸ ಸಾರ್ವಜನಿಕ ಸೇವೆಯನ್ನು ಆರಂಭಿಸುವುದು.
4. ಆಡಳಿತ/ನಿರ್ವಹಣೆಯನ್ನು ಉತ್ತಮಗೊಳಿಸುವುದು.
5. ಸಂಪನ್ಮೂಲ ಸಂಗ್ರಹಣೆಯಲ್ಲಿ ಪ್ರಗತಿ ಅಥವಾ ಹೊಸ ಸಂಪನ್ಮೂಲ ಮೂಲವನ್ನು ಒದಗಿಸುವುದು.
6. ಸೃಜನಾತ್ಮಕವಾದ ಮತ್ತು ತಂತ್ರಜ್ಞಾನ ಹೊಂದಿದ ಉತ್ತಮ ಪೈಲೆಟ್ ಯೋಜನೆಯನ್ನು ಆಹ್ವಾನಿಸುವುದು.

ಅನುಷ್ಠಾನಗೊಳಿಸುವ ಯೋಜನೆಯು ಸಾರ್ವಜನಿಕ ಹಿತಾಶಕ್ತಿ ಹಾಗು ಅನುಕೂಲಕ್ಕಾಗಿ ಇದ್ದು, ಗುಣಮಟ್ಟದ್ದಾಗಿರಬೇಕು. ಉದಾಹರಣೆಯಾಗಿ ಸಂಸ್ಥೆ ಹಾಗೂ ವಿದ್ಯಾರ್ಥಿಗಳ ವಸತಿ ನಿಲಯಗಳಲ್ಲಿ ಬೋರವೆಲ್ ರಿಚಾರ್ಜಿಂಗ್ (water harvesting), ಆಟೋಮೊಬೈಲ್ ವಿಭಾಗಗಳಲ್ಲಿ ಸುಸಜ್ಜಿತ ಹಾಗೂ ತಂತ್ರಜ್ಞಾನ ಆಧಾರಿತ ಆಟೋಮೊಬೈಲ್ ಸರ್ವಿಸ್ ಸೆಂಟರ್‌ಗಳು, ವಿದ್ಯಾರ್ಥಿ ಸ್ಟಾರ್ಟ್‌ಅಪ್ ಯೋಜನೆಗೆ ಸಹಕಾರಿಯಾಗುವ ಇನ್‌ಕ್ಯುಬೇಷನ್ ಸೆಂಟರ್‌ಗಳು, ಸಿವಿಲ್ ಇಂಜಿನಿಯರಿಂಗ್ ಕನ್ಸಲ್‌ಟೆಂನ್ಸಿ ಸೆಂಟರ್, ಇಂಜಿನಿಯರಿಂಗ್ ಟೆಸ್ಟಿಂಗ್ ಅಂಡ್ ಸರ್ವಿಸಿಂಗ್ ಸೆಂಟರ್ಸ್ ಸೆಂಟರ್ ಇತ್ಯಾದಿ ಯೋಜನೆಗಳನ್ನು ಪರಿಗಣಿಸಬಹುದಾಗಿದೆ.

ವಿಸ್ತೃತ ಯೋಜನಾ ವರದಿ (Detailed Project Report)ಯು ಈ ಕೆಳಕಂಡ ರೂಪರೇಷೆ/ವಿವರಗಳನ್ನು ಹೊಂದಿರಬೇಕು.

- Cover page indicating institute details and proposed project title
- Content Sheet
- Introduction note /preamble on concept of the proposed project.
- Objectives of the proposed project.
- Market/ General public demand/utility.
- Infrastructure / Equipments required for the proposed project.
- Human resource required for the proposed project.
- Financial requirements in detail for the proposed project.
- MOU /MOA required in case of PPP (Public Private Partnership) model.
- Expected revenue and expenditure.
- Justification of the proposed project.
- Cost benefits ratio analysis.
- Conclusion or any other related information of the proposed project.

ಪೂರ್ಣಗೊಳಿಸಿದ ವಿಸ್ತೃತ ಯೋಜನಾ ವರದಿ (Detailed Project Report)ಯ ಮುದ್ರಿತ ಪ್ರತಿಯನ್ನು ದಿನಾಂಕ: 28-07-2017ರೊಳಗೆ ಜಂಟಿ ನಿರ್ದೇಶಕರು-ಸಿಡಿಸಿ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ ಅರಮನೆ ರಸ್ತೆ, ಬೆಂಗಳೂರು ಇವರಿಗೆ ಸಲ್ಲಿಸಲು ಹಾಗು ಸದರಿ ವರದಿಯ ಸಾಫ್ಟ್ ಪ್ರತಿಯನ್ನು jointdirector.cdc@gmail.com ಗೆ ಇಮೇಲ್ ಮೂಲಕ ಸಲ್ಲಿಸಲು ಸೂಚಿಸಿದೆ.

ಜಂಟಿ ನಿರ್ದೇಶಕರು(ಸಿಡಿಸಿ)

ಇವರಿಗೆ,

ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್ ಹಾಗೂ ಇಂಜಿನಿಯರಿಂಗ್ ಕಾಲೇಜುಗಳ ಪ್ರಾಚಾರ್ಯರುಗಳಿಗೆ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ

ಪ್ರತಿ: ಇ-ಆಡಳಿತ ವಿಭಾಗ, ತಾಂ.ಶಿ.ನಿ, ಬೆಂಗಳೂರು, ಡಿ.ಟಿ.ಇ. ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.